ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 01-02-1976.

# *ಆತ್ಮಿಕ ದೀಪ ಮತ್ತು ಮೂರು ಪ್ರಕಾರದ ಆತ್ಮಿಕ ದೀಪದ ಪತಂಗ(ಹುಳು)ಗಳು*

(रूहानी शमा और तीन प्रकार के रूहानी परवाने)

**ಸರ್ವ ಪ್ರಕಾರದ ಚಕ್ರಗಳಿಂದ ಬಿಡಿಸಿ ಚಕ್ರವರ್ತಿ ಮಹಾರಾಜನನ್ನಾಗಿ ತಯಾರು ಮಾಡುವವರು, ಸದಾ ಜಾಗೃತಿ ಜ್ಯೋತಿ, ಆತ್ಮಿಕ ದೀಪವಾದ ಪರಮಪಿತ ಶಿವ ಪರಮಾತ್ಮ ಹೇಳಿದರು.**

ಇಂದು ಆತ್ಮಿಕ ದೀಪ ಆತ್ಮಿಕ ಪತಂಗ (ದೀಪದಹುಳು)ಗಳನ್ನು ನೋಡುತ್ತಿದ್ದಾರೆ. ಒಂದೇ ಜ್ಯೋತಿ(ದೀಪ)ಯಲ್ಲಿ ಎಲ್ಲಾ ಪತಂಗಗಳೂ ಸ್ವಾಹಾ ಆಗುವುದಕ್ಕಾಗಿ ನಂಬರ್‌ವಾರ್ ಆಗಿ ಪ್ರಯತ್ನದಲ್ಲಿ ತೊಡಗಿದ್ದಾರೆ. ಯಾರು ನಂಬರ್‌ವನ್ ಪತಂಗಗಳಾಗಿದ್ದಾರೆ ಅವರಿಗೆ ಸ್ವಯಂನ ಅರ್ಥಾತ್ ಈ ದೇಹಭಾನದ, ಹಗಲು-ರಾತ್ರಿಯ, ಹಸಿವು ಮತ್ತು ಬಾಯಾರಿಕೆಯ, ತನ್ನ ಸುಖದ ಸಾಧನಗಳ, ವಿಶ್ರಾಂತಿಯ, ಯಾವುದೇ ಮಾತಿನ ಆಧಾರವಿರುವುದಿಲ್ಲ. ಎಲ್ಲಾ ಪ್ರಕಾರದ ದೇಹದ ಸ್ಮೃತಿಯಿಂದ ಕಳೆದುಹೋಗಿರುವ ಅರ್ಥಾತ್ ನಿರಂತರವಾಗಿ ಜ್ಯೋತಿಯ ಪ್ರೀತಿಯಲ್ಲಿ ಲವಲೀನವಾಗಿದ್ದೀರಾ? ಹೇಗೆ ಬೆಳಕು ಜ್ಯೋತಿಸ್ವರೂಪವಾಗಿದೆಯೋ , ಪ್ರಕಾಶ ಮತ್ತು ಶಕ್ತಿ ರೂಪವಾಗಿದೆಯೋ ಹಾಗೆಯೇ ಸ್ವಯಂ ಸಹ ಜ್ಯೋತಿಯ ಸಮಾನ ಪ್ರಕಾಶ ಮತ್ತು ಶಕ್ತಿ ರೂಪವಾಗಿದ್ದೀರಾ? ಇನ್ನೊಂದು ಪ್ರಕಾರದ ಪತಂಗವು ಜ್ಯೋತಿಯ ಪ್ರಕಾಶ ಮತ್ತು ಶಕ್ತಿಯನ್ನು ನೋಡುತ್ತಾ ಅದರಕಡೆ ಅವಶ್ಯವಾಗಿ ಆಕರ್ಷಿತವಾಗುತ್ತದೆ, ಸಮೀಪಕ್ಕೆ ಹೋಗಲು ಬಯಸುತ್ತದೆ. ಸಮಾನವಾಗಲು ಬಯಸುತ್ತದೆ ಆದರೆ ದೇಹಭಾನದ ಸ್ಮೃತಿ ಹಾಗೂ ದೇಹದ ಸಂಬಂಧದ ಸ್ಮೃತಿ, ದೇಹದ ವೈಭವಗಳ ಸ್ಮೃತಿ, ದೇಹಭಾನಕ್ಕೆ ವಶವಾಗಿ ತಮೋಗುಣಿ ಸಂಸ್ಕಾರಗಳ ಸ್ಮೃತಿ, ಸಮೀಪಕ್ಕೆ ಹೋಗುವ ಸಾಹಸ ಅಥವಾ ಧೈರ್ಯವನ್ನು ಧಾರಣೆ ಮಾಡಲುಕೊಡುತ್ತಿಲ್ಲ. ಇಂತಹ ಅನೇಕ ಪ್ರಕಾರದ ಸ್ಮೃತಿಗಳ ಗೊಂದಲದಲ್ಲಿ ಸಮಯವನ್ನು ಕಳೆದುಬಿಡುತ್ತದೆ.

**ಫರ್ಸ್ಟ್ ನಂಬರ್‌ನವರಾಗಿದ್ದಾರೆ - ಲವಲೀನ ಪತಂಗಗಳು.**

ಅರ್ಥಾತ್ ತಂದೆಯ ಸಮಾನ ಸ್ವರೂಪ ಮತ್ತು ಶಕ್ತಿಗಳನ್ನು ಧಾರಣೆ ಮಾಡುವವರು, ತಂದೆಯ ಸರ್ವಖಜಾನೆಗಳನ್ನು ಸ್ವಯಂನಲ್ಲಿ ಸಮಾವೇಶ ಮಾಡುವವರು, ಸಮಾನರಾಗುವ ಅರ್ಥಾತ್ ಸಮಾವೇಶವಾಗುವವರು ಅರ್ಥಾತ್ ಸತ್ತು ಸಮಾಪ್ತಿಯಾಗುವವರಾಗಿರುತ್ತಾರೆ.

**ಎರಡನೆಯ ನಂಬರ್** - ಅನೇಕ ಪ್ರಕಾರದ ಚಕ್ರ ತಿರುಗುವವರು ಅರ್ಥಾತ್ ಅನೇಕ ಸ್ಮೃತಿಗಳೆಂಬ ಚಕ್ರವನ್ನು ಸುತ್ತುವವರು. ಅವರು ಲೀನವಾಗುವವರು ಇವರು ಯೋಚಿಸುವಂತವರು.

**ಮೂರನೇ ನಂಬರಿನ ಪತಂಗಗಳು** - ಜ್ಯೋತಿಯನ್ನು ನೋಡಿ ಆಕರ್ಷಿತರೂ ಆಗುತ್ತಾರೆ, ಯೋಚನೆಯನ್ನೂ ಮಾಡುತ್ತಾರೆ ಆದರೆ ದ್ವಂದ್ವದಲ್ಲಿರುತ್ತಾರೆ ಅರ್ಥಾತ್ ಎರಡು ದೋಣಿಗಳಲ್ಲಿ ಕಾಲನ್ನಿಡಲು ಬಯಸುತ್ತಾರೆ. ಮಾಯೆಯ ಅಲ್ಪಕಾಲದ ಸುಖವನ್ನೂ ಬಯಸುತ್ತಾರೆ ಮತ್ತು ಜ್ಯೋತಿಯ ಮೂಲಕ ಅಥವಾ ತಂದೆಯ ಮೂಲಕ ಅವಿನಾಶಿ ಪ್ರಾಪ್ತಿಗಳನ್ನೂ ಬಯಸುತ್ತಾರೆ. ಇವರು ಪದೇ-ಪದೇ ಕೇಳುವವರಾಗಿರುತ್ತಾರೆ. ಅವರು ಯೋಚಿಸುವವರು ಮತ್ತು ಇವರು ಕೇಳುವವರಾಗಿರುತ್ತಾರೆ. ಈ ರೀತಿ ಮಾಡುವುದೇ ಅಥವಾ ಬೇಡವೇ? ಪ್ರಾಪ್ತಿಯಾಗುತ್ತದೆಯೇ ಅಥವಾ ಆಗುವುದಿಲ್ಲವೆ, ಇದು ಆಗಲು ಸಾಧ್ಯವಿದೆಯೇ ಅಥವಾ ಇಲ್ಲವೆ, ಕಷ್ಟವೇ ಅಥವಾ ಸಹಜವೇ? ಇದೊಂದೇ ಮಾರ್ಗವು ಸರಿಯಿದೆಯೇ ಅಥವಾ ಮತ್ತೇನಾದರೂ ಇದೆಯೇ? ಈ ರೀತಿ ಸ್ವಯಂನೊಂದಿಗೆ ಹಾಗೂ ಅನ್ಯ

ಅನುಭವಿ ಆತ್ಮರೊಂದಿಗೆ ಕೇಳುವವರಾಗಿರುತ್ತಾರೆ. ಇಚ್ಛೆಯಿದೆ ಆದರೆ, ಇಚ್ಛಾಮಾತ್ರಂ ಅವಿದ್ಯಾ ಆಗುವ ಸಾಹಸವೇ ಇಲ್ಲವಾಗಿರುತ್ತದೆ. ಮಿಲನ ಮಾಡಲೂ ಬಯಸುತ್ತಾರೆ. ಆದರೆ ಬದುಕಿದ್ದಂತೆಯೇ ಸಾಯಲು ಬಯಸುವುದಿಲ್ಲ. ಬದುಕಿದ್ದಂತೆಯೇ ಸಾಯುವ ಅಥವಾ ಬಿಡುವುದರಲ್ಲಿ ಹೃದಯವಿಧೀರ್ಣವಾಗುತ್ತಾರೆ (ಮನಸ್ಸಿನಿಂದ ಬಲಹೀನ). ಈ ರೀತಿ ಮೂರು ಪ್ರಕಾರದ ಪತಂಗಗಳು ಜ್ಯೋತಿಯೆಡೆಗೆ ಬರುತ್ತಾರೆ.

ಈಗ ತಮ್ಮೊಂದಿಗೆ ತಾವು ಕೇಳಿಕೊಳ್ಳಿ ನಾನು ಎಂತಹ ಪತಂಗವಾಗಿದ್ದೇನೆ? ಅನೇಕ ಪ್ರಕಾರದ ಸ್ಮೃತಿಗಳ ಗೊಂದಲಗಳು ಸಮಾಪ್ತಿಯಾಗಿದೆಯೇ ಅಥವಾ ತನ್ನ ಕಡೆ ಈಗಿನವರೆಗೂ ಒಂದಲ್ಲ ಒಂದು ಗೊಂದಲವು ಆಕರ್ಷಿಸುತ್ತದೆಯೇ? ಒಂದುವೇಳೆ ಯಾವುದೇ ವ್ಯರ್ಥ ಸ್ಮೃತಿಯ ಗೊಂದಲವೇನಾದರೂ ಈಗಿನವರೆಗೂ ಆಕರ್ಷಿಸುತ್ತದೆಯೆಂದರೆ ಸ್ವದರ್ಶನಚಕ್ರಧಾರಿ, ಸಂಗಮಯುಗೀ ಬ್ರಾಹ್ಮಣರ ಬಿರುದು ಪ್ರಾಪ್ತಿಯಾಗಲು ಸಾಧ್ಯವಿಲ್ಲ. ಯಾರು ಸ್ವದರ್ಶನ ಚಕ್ರಧಾರಿಯಾಗಿರುವುದಿಲ್ಲವೋ ಅವರು ಭವಿಷ್ಯದ ಚಕ್ರವರ್ತಿ ರಾಜರೂ ಸಹ ಆಗುವುದಿಲ್ಲ. 63 ಜನ್ಮಗಳನ್ನು ಭಕ್ತಿ ಮಾರ್ಗದ ಅನೇಕ ಪ್ರಕಾರದ ವ್ಯರ್ಥಚಕ್ರಗಳಲ್ಲಿ ತೊಡಗಿಸುವುದರಲ್ಲಿಯೇ ಕಳೆದುಹೋಯಿತು. ಈಗ ಸಂಗಮಯುಗದಲ್ಲಿಯೂ ಸಹ ಬಯಸದಿದ್ದರೂ ಅದೇ ಸಂಸ್ಕಾರವನ್ನು ಏಕೆ ಇಮರ್ಜ್ ಮಾಡಿಬಿಡುತ್ತೀರಿ? ಗೊಂದಲದಲ್ಲಿ ತೊಡಗುವುದರಲ್ಲಿ ಪ್ರಾಪ್ತಿಯ ಅನುಭವವಾಗುತ್ತದೆಯೇ ಅಥವಾ ನಿರಾಶೆ ಯಾಗುತ್ತದೆಯೇ? 63 ಜನ್ಮಗಳಲ್ಲಿ ಗೊಂದಲದಲ್ಲಿ ತೊಡಗಿಸುತ್ತಾ, ಎಲ್ಲವನ್ನೂ ಕಳೆದುಕೊಳ್ಳುತ್ತಾ, ಸ್ವಯಂನ್ನು ಹಾಗೂ ತಂದೆಯನ್ನು ಮರೆಯುತ್ತಾ, ಈಗಿನವರೆಗೂ ಸುಸ್ತಾಗಿಲ್ಲವೆ - ನೆಲೆಯು ಸಿಕ್ಕರೂ ಸಹ ಗೊಂದಲವನ್ನು ಸಮಾಪ್ತಿ ಮಾಡುತ್ತಿರುತ್ತೀರಾ? ಅವಿನಾಶಿ ಪ್ರಾಪ್ತಿಯಾಗುತ್ತಾ, ಈಗಲೂ ವಿನಾಶಿ ಅಲ್ಪಕಾಲದ ಪ್ರಾಪ್ತಿಯೇ ಆಕರ್ಷಣೆ ಮಾಡುತ್ತದೆಯೇ? ಈಗಿನವರೆಗೂ ಬೇರೆ ನೆಲೆಯನ್ನು ಪ್ರಾಪ್ತಿ ಮಾಡಿಕೊಳ್ಳುವುದು ಕಾಣಿಸುತ್ತಿದೆಯೇ? ಅಥವಾ ಶ್ರೇಷ್ಠವಾದ ನೆಲೆ(ಗುರಿ)ಯು ತಿಳಿದಿದ್ದರೂ ಸಹ ಅಲ್ಪಕಾಲದ ನೆಲೆಯನ್ನು ಅವಸರ ಸಮಯಕ್ಕಾಗಿ ಉಪಯೋಗವಾಗುತ್ತದೆ ಎಂದು ನೋಡಿಟ್ಟುಕೊಳ್ಳುತ್ತಿದ್ದೀರಾ? ಇಂತಹ ಚತುರರೂ ಬಹಳಷ್ಟಿದ್ದಾರೆ. ತೆಗೆದುಕೊಳ್ಳುವ ಸಮಯದಲ್ಲಿ ಎಲ್ಲವನ್ನೂ ತೆಗೆದುಕೊಳ್ಳುವುದರಲ್ಲಿ ಬುದ್ಧಿವಂತರಾಗಿದ್ದಾರೆ ಆದರೆ ಬಿಡುವ ಸಮಯದಲ್ಲಿ ತಂದೆಯೊಂದಿಗೆ ಚತುರತೆಯನ್ನು ಮಾಡುತ್ತಾರೆ. ಯಾವ ಚತುರತೆಯನ್ನು ಮಾಡುತ್ತಾರೆ? ಬಿಡುವ ಸಮಯದಲ್ಲಿ ಮುಗ್ಧರಾಗಿಬಿಡುತ್ತಾರೆ. ಪುರುಷಾರ್ಥಿಯಾಗಿದ್ದೇನೆ, ಸಮಯದಲ್ಲಿ ಬಿಟ್ಟುಹೋಗುತ್ತದೆ, ಪರಿಸ್ಥಿತಿಗಳೇ ಆ ರೀತಿಯಿದೆ, ಲೆಕ್ಕಾಚಾರವು ಕಠಿಣವಾಗಿದೆ, ಬಯಸುತ್ತೇನೆ ಆದರೆ ಏನು ಮಾಡಲಿ? ನಿಧಾನ- ನಿಧಾನವಾಗಿ ಆಗಿಬಿಡುತ್ತದೆ - ಈ ರೀತಿ ಮುಗ್ಧರಾಗಿ ಮಾತನಾಡುತ್ತಾರೆ. ಜ್ಞಾನಸಾಗರ ತಂದೆಗೂ ಸಹ ಜ್ಞಾನವನ್ನು ಕೊಡಲು ತೊಡಗಿಬಿಡುತ್ತಾರೆ. ಕರ್ಮಗಳ ಗತಿಯನ್ನು ತಿಳಿದುಕೊಂಡಿರುವವರಿಗೆ ತನ್ನ ಕರ್ಮದ ಕಥೆಗಳನ್ನು ತಿಳಿಸಿಬಿಡುತ್ತಾರೆ ಮತ್ತು ತೆಗೆದುಕೊಳ್ಳುವ ಸಮಯದಲ್ಲಿ ಚತುರರಾಗಿ ಬಿಡುತ್ತಾರೆ. ಚತುರತೆಯಿಂದ ಏನು ಹೇಳುತ್ತಾರೆ - "ತಾವಂತು ದಯಾ ಹೃದಯಿಯಾಗಿದ್ದೀರಿ, ವರದಾತನಾಗಿದ್ದೀರಿ. ನಾನೂ ಸಹ ಅಧಿಕಾರಿಯಾಗಿದ್ದೇನೆ, ಮಗುವಾಗಿದ್ದೇನೆ ಅಂದಮೇಲೆ ಪೂರ್ಣ ಅಧಿಕಾರವೂ ನನಗೇ ಸಿಗಬೇಕು". ತೆಗೆದುಕೊಳ್ಳುವುದರಲ್ಲಿ ಪೂರ್ಣ ತೆಗೆದುಕೊಳ್ಳುವುದು ಮತ್ತು ಬಿಡುವುದರಲ್ಲಿ ಅಲ್ಪಸ್ವಲ್ಪ ಬಚ್ಚಿಡುವುದು ಅರ್ಥಾತ್ ಅಲ್ಪಸ್ವಲ್ಪ ತನ್ನ ಹಳೆಯ ಸಂಸ್ಕಾರ, ಸ್ವಭಾವ ಅಥವಾ ಸಂಬಂಧವನ್ನೂ ಜೊತೆಜೊತೆಯಲ್ಲಿ ಇಡುತ್ತಿರುವುದೆಂದರೆ ಚತುರರಾದರಲ್ಲವೆ? ತೆಗೆದುಕೊಳ್ಳುವುದು ಸಂಪೂರ್ಣವಾಗಿರುತ್ತದೆ ಆದರೆ ಕೊಡುವುದು ಯಥಾಶಕ್ತಿ- ಇಂತಹ ಚತುರತೆಯನ್ನು ಮಾಡುವವರು ಎಂತಹ ಪ್ರಾಲಬ್ಧವನ್ನು ಪಡೆಯುತ್ತಾರೆ! ಇಂತಹ ಚತುರ ಮಕ್ಕಳ ಜೊತೆ ಡ್ರಾಮಾನುಸಾರ ಎಂತಹ ಚತುರತೆಯಾಗುತ್ತದೆ?

ಸ್ವರ್ಗದ ಅಧಿಕಾರಿಗಳಂತು ಎಲ್ಲರೂ ಆಗಿಬಿಡುತ್ತಾರೆ. ಆದರೆ ರಾಜಧಾನಿಯಲ್ಲಿ ನಂಬರ್ ವಾರ್ ಇದ್ದೇ ಇರುತ್ತಾರಲ್ಲವೆ! ತಂದೆಯು ಎಲ್ಲರಿಗೂ ಸ್ವರ್ಗದ ಆಸ್ತಿಯನ್ನು ಕೊಡುತ್ತಾರೆ ಆದರೆ ಪ್ರತಿಯೊಬ್ಬರ ಸ್ಥಾನವು ತನ್ನ ನಂಬರಿನದಾಗಿದೆ. ಅಂದಮೇಲೆ ಡ್ರಾಮಾನುಸಾರವಾಗಿ ಎಂತಹ ಪುರುಷಾರ್ಥವೋ ಅಂತಹ ಪದವಿಯೂ ಸ್ವತಹವಾಗಿ ಪ್ರಾಪ್ತಿಯಾಗಿ ಬಿಡುತ್ತದೆ. ತಂದೆಯು ನಂಬರನ್ನು ಮಾಡುವುದಿಲ್ಲ. ಕೆಲವರನ್ನು ರಾಜರು, ಕೆಲವರು ಪ್ರಜೆಗಳಾಗುವ ಜ್ಞಾನವು ಬೇರೆ-ಬೇರೆಯಿರುವುದಿಲ್ಲ, ಕೆಲವರನ್ನು

ಸೂರ್ಯವಂಶಿ, ಕೆಲವರನ್ನು ಚಂದ್ರವಂಶಿಯಾಗುವ ವಿದ್ಯೆಯನ್ನು ವಿಶೇಷವಾಗಿ ಓದಿಸುವುದಿಲ್ಲ. ಕೆಲವರನ್ನು ಮಹಾರಥಿ, ಕೆಲವರನ್ನು ಕುದುರೆಸವಾರನೆಂದು ಮುದ್ರೆಯನ್ನು ಹಾಕುವುದಿಲ್ಲ. ಆದರೆ ಡ್ರಾಮಾನುಸಾರವಾಗಿ ಹೇಗೆ ಯಾರೇನು ಮಾಡುತ್ತಾರೆಯೋ ಹಾಗೆಯೇ ಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಆದ್ದರಿಂದ ತೆಗೆದುಕೊಳ್ಳುವುದರಲ್ಲಿ ಹೇಗೆ ಚತುರರಾಗುತ್ತಾರೆ ಹಾಗೆಯೇ ಕೊಡುವುದರಲ್ಲಿಯೂ ಚತುರರಾಗಬೇಕು, ಮುಗ್ಧರಾಗಬಾರದು! ಮಾಯೆಯ ಚತುರತೆಯನ್ನು ತಿಳಿದು ಮಾಯಾಜೀತರಾಗಿರಿ. ಒಂದು ಯಥಾರ್ಥವಾದ ಸ್ಥಿತಿಗೆ ಬದಲಾಗಿ ಈಗಿನವರೆಗೂ ಮತ್ತ್ಯಾವುದೇ ಅಲ್ಪಕಾಲದ ಸ್ಥಾನವು ಉಳಿದುಕೊಂಡಿಲ್ಲವೇ ಎಂದು ಪರಿಶೀಲನೆ ಮಾಡಿರಿ. ಎಲ್ಲಿ ಬಯಸದಿದ್ದರೂ ಬುದ್ಧಿಯು ಹೊರಟುಹೋಗುತ್ತದೆ? ಬುದ್ಧಿಯು ಎಲ್ಲಿಗೋ ಹೋಗುತ್ತಿದೆ ಎಂದರೆ ಸ್ಥಾನವಿದೆ. ಅಂದಮೇಲೆ ಈಗ ಎಲ್ಲಾ ಅಲ್ಪಕಾಲದ ನೆಲೆಗಳನ್ನು ಪರಿಶೀಲನೆ ಮಾಡಿ ಸಮಾಪ್ತಿ ಮಾಡಿ. ಇಲ್ಲವೆಂದರೆ ಇದೇ ನೆಲೆ(ಆಶ್ರಯ)ಯು ಸದಾಕಾಲದ ಶ್ರೇಷ್ಠನೆಲೆಯಿಂದ ದೂರ ಮಾಡಿಬಿಡುತ್ತದೆ. ಈ ರೀತಿ ಮಾಡಿ ಎಂದು ತಂದೆಯು ಶ್ರೀಮತವನ್ನು ಸ್ಪಷ್ಟವಾಗಿ ಕೊಡುತ್ತಾರೆ ಆದರೆ ಮಕ್ಕಳು ಹೀಗೆ ಎನ್ನುವುದನ್ನು ಹೇಗೆ ಎನ್ನುವುದರಲ್ಲಿ ಬದಲಾಯಿಸಿ ಬಿಡುತ್ತಾರೆ. ಹೇಗೆ ಎನ್ನುವುದನ್ನು ಸಮಾಪ್ತಿ ಮಾಡಬೇಕು. ತಂದೆಯು ಹೇಗೆ ನಡೆಸುತ್ತಿದ್ದಾರೆ ಹಾಗೆಯೇ ನಡೆಯಿರಿ, ಒಳ್ಳೆಯದು.

**ನಂಬರ್ ವನ್ ಜ್ಯೋತಿಯ ಸಮಾನ ಲೈಟ್ ಹೌಸ್, ಮೈಟ್ ಹೌಸ್ ನಂಬರ್ ಪತಂಗಗಳು, ಅನೇಕ ಗೊಂದಲಗಳನ್ನು ಸಮಾಪ್ತಿ ಮಾಡಿ ಸ್ವದರ್ಶನಚಕ್ರಧಾರಿ ಆಗುವಂತಹ, ವಿಶ್ವದ ಮಾಲೀಕರಾಗುವ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ, ಪ್ರತೀ ಹೆಜ್ಜೆಯನ್ನು ತಂದೆಯ ಶ್ರೀಮತದಂತೆ ಇಡುವಂತಹ, ಈ ರೀತಿ ಹೆಜ್ಜೆಯಲ್ಲಿ ಪದಮಗಳ ಶ್ರೇಷ್ಠ ಸಂಪಾದನೆಯನ್ನು ಜಮಾ ಮಾಡುವಂತಹ, ಸದಾ ಲವಲೀನರಾಗುವಂತಹ ಪತಂಗಗಳಿಗೆ ತಂದೆ ಜ್ಯೋತಿಯ ನೆನಪು-ಪ್ರೀತಿ ಹಾಗೂ ನಮಸ್ತೆ.**

ಅವ್ಯಕ್ತ ಮುರಳಿ 01-02-1976.

***ಆತ್ಮಿಕ ದೀಪ ಮತ್ತು ಮೂರು ಪ್ರಕಾರದ ಆತ್ಮಿಕ ದೀಪದ ಪತಂಗಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ದೇಹಾಭಿಮಾನದ ರಾತ್ರಿ-ಹಗಲು, ಹಸಿವು-ಬಾಯಾರಿಕೆ, ಸುಖ ಸಾಧನ ಶಾಂತಿಯ, ಯಾವುದೇ ವಿಷಯದ ಆಧಾರವಿಲ್ಲದ ನಂಬರ್ ಒನ್ ದೀಪದಪತಂಗ(ಹುಳು).

2. ನಾನು ದೀಪದ ಸಮಾನವಾಗಿ ಪ್ರಕಾಶ ಮತ್ತು ಶಕ್ತಿಯ ಸ್ವರೂಪ.

3. ನಾನು ತಂದೆಯ ಸಮಾನ ಸ್ವರೂಪವಾಗಿ, ಶಕ್ತಿಗಳನ್ನು ಧಾರಣೆ ಮಾಡಿ ತಂದೆಯ ಸರ್ವ ಖಜಾನೆಗಳನ್ನು ಸ್ವಯಂನಲ್ಲಿ ಧಾರಣೆ ಮಾಡಿಕೊಂಡು ಲೀನವಾಗಿರುವ ಲವಲೀನ ದೀಪದ ಪತಂಗ.

4. ನಾನು ಅನೇಕ ಪ್ರಕಾರದ ವ್ಯರ್ಥ ಚಕ್ರಗಳನ್ನು ಸಮಾಪ್ತಿ ಮಾಡಿರುವ ಸ್ವದರ್ಶನ ಚಕ್ರಧಾರಿ ಮತ್ತು ಭವಿಷ್ಯತ್ತಿನಲ್ಲಿ ಚಕ್ರವರ್ತಿ ರಾಜನು.